ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆಂ.ಮ.ಪಾ/ಕಾ.ಅ/ಬ್ಯಾ.ವಿ/ಆ.ಅ/ 120 /2019-20

ಕಾರ್ಯಪಾಲಕ ಅಭಿಯಂತರವರ ಕಛೇರಿ
ಬ್ಯಾಟರಾಯನಪುರ, ಬೃ.ಬೆಂ.ಮ.ಪಾ.
ಬೆಂಗಳೂರು-92
ದಿನಾಂಕ: 16/03/2020

ಆಡಳಿತಾತ್ಮಕ ಅನುಮೋದನೆ

ವಿಷಯ:- Improvements of CC roads and RCC Drains at Left Side Cross Roads of 2nd main road, Kuvempu Nagara and surrounding area in Ward No.05.

ಉಲ್ಲೇಖ:1. ಮುಖ್ಯ ಲೆಕ್ಕಾಧಿಕಾರಿ ರವರ ಕಛೇರಿ , ಕಾಮಗಾರಿ ಸಂಕೇತ: 005-20-000084
2. ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ:ವಾಕಾಸ್ಥಾಸ/616/2019-20 ದಿನಾಂಕ: 05.03.2020ರ ನಡವಳಿಯ ಆದೇಶದಂತೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ಉಪವಿಭಾಗ) ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯದಲ್ಲಿ **P3736** ರ ಅಡಿಯಲ್ಲಿ ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ಮೇಲ್ಕಂಡ ಕಾಮಗಾರಿಯನ್ನು **ರೂ. 96.00** ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯನ್ನು ಮಾನ್ಯ ಆಯುಕ್ತರವರು ಆದೇಶ ಸಂಖ್ಯೆ:ಬಿ12(1)ಪಿ.ಆರ್/394/2011-12 ದಿನಾಂಕ: :04-10-2018ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಕೆಳಗಿನ ಷರತ್ತುಗಳನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಹಾಗೂ ಆಡಳಿತಾತ್ಮಕ ಅನುಮೋದನೆ ಪುಸ್ತಕ ಕ್ರ.ಸಂ 120 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ದಗೊಳಿಸುವುದು.
2. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
3. ಆರ್.ಸಿ.ಸಿ ಡೆಕ್‌ಸ್ಲಾಬ್, ಹರಿನೀರು ಮೋರಿಯ ಆಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
4. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
5. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ / ಅನುದಾನಗಳಲ್ಲಿ ಕೈಗೊಂಡಿಲ್ಲದೇ ಇರುವ ಮತ್ತು ಪುನಾರಾವರ್ತನೆಯಾಗದಿರುವ ಬಗ್ಗೆ ದೃಢಪಡಿಸಿಕೊಳ್ಳುವುದು.
6. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಮುಲೆಅ/ಆಯವ್ಯಯ/2019-20/ಪಿಆರ್/11/2018-19, ದಿನಾಂಕ:12.06.2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಬಿಬಿಎಂಪಿ/ಆ/ಪಿ.ಆರ್/5287/2019-20 ದಿ:05.11.2019ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸುವುದು.
7. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಕುರಿತು, ಕಡತದಲ್ಲಿ ಲಗತ್ತಿಸಿರುವ Geo-tagged ಛಾಯಾಚಿತ್ರಗಳಲ್ಲಿ ಗುರುತಿಸಿರುವ ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಕಾಮಗಾರಿಯನ್ನು ಕೈಗೊಳ್ಳುವುದು.
8. ರಸ್ತೆ ಇತಿಹಾಸವನ್ನು ನಿರ್ವಹಿಸುವ ಬಗ್ಗೆ ಸರ್ಕಾರವು ಹೊರಡಿಸಿರುವ ಸಂಖ್ಯೆ:ನಅಇ/248/ಎಂಎನ್‌ವೈ/2019, ದಿನಾಂಕ:22.10.2019ರ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

16/03

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ
ಬಿ.ಬಿ.ಎಂ.ಪಿ ಬೆಂಗಳೂರು-92

16/03

ಪ್ರತಿಯನ್ನು:

1. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಮಾಹಿತಿಗಾಗಿ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ, ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ಹಣಕಾಸು ನಿಯಂತ್ರಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಮಾಹಿತಿಗಾಗಿ.
4. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಮಾಹಿತಿಗಾಗಿ.